ಬೆಂಗಳೂರು ಪಶ್ಚಿಮ ನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ:---------- ಪುಟದ ಸಂಖ್ಯೆ 17

---------- ಕಡತದ ಸಂಖ್ಯೆ----------

ಟಿಪ್ಪಣಿ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ.

63 ಪದ್ಮನಾಭನಗರ ವಿಧಾನ ಸಭಾಕ್ಷೇತ್ರದ ವ್ಯಾಪ್ತಿಗೆ ಬರುವ ವಾರ್ಡ್ ಸಂಖ್ಯೆ 108 ರಗಣೇಶ ಮಂದಿರದ ಬನಶಂಕರಿ 2ನೇ ಹಂತದಲ್ಲಿ ಪಾಲಿಕೆಯಿಂದ ನಿರ್ಮಿಸಲಾಗಿರುವ ಈಜುಕೊಳದ ನಿರ್ವಹಣೆಯನ್ನು ಹೊರ ಗುತ್ತಿಗೆ ಆಧಾರದ ಮೇರೆಗೆ ನಿಯೋಜಿಸುವ ಬಗ್ಗೆ ಕಂಡಿಕೆ (30) ರಿಂದ (39) ರವರೆಗೆ ಸಲ್ಲಿಸಲಾಗಿರುವ ಪ್ರಸ್ತಾವನೆಯ ಬಗ್ಗೆ ಮಾನ್ಯ ಆಯುಕ್ತರು, ಬೆಂಗಳೂರು ಪಶ್ಚಿಮ ನಗರ ಪಾಲಿಕೆ ರವರೊಂದಿಗೆ ಚರ್ಚಿಸಲಾಗಿ, ಮಾನ್ಯ ಆಯುಕ್ತರು "ಹೇಗಿದೆಯೋ ಹಾಗೆ" (As is Where is basis)ವರ್ಗಾಯಿಸಿ, ಹೊರ ಗುತ್ತಿಗೆ ಆಧಾರದ ಮೇಲೆ ನಿರ್ವಹಣೆಗಾಗಿ ಅಲ್ಪಾವಧಿ ಟೆಂಡರ್ ಕರೆಯಲು ಸೂಚಿಸಿರುತ್ತಾರೆ.

64) ದಿನಾಂಕ: 27.02.2026 ರಂದು ಚರ್ಚಿಸಿದಂತೆ, ಪಾಲಿಕೆ ವ್ಯಾಪ್ತಿಯಲ್ಲಿ ಈಜುಕೊಳಗಳಿಗೆ ಹೊರ ಗುತ್ತಿಗೆ ಆಧಾರದ ಮೇಲೆ ನಿರ್ವಹಣೆಗೆ ನಿಯೋಜಿಸಿರುವ ಬಗ್ಗೆ ಮಾಹಿತಿಯನ್ನು ಪಡೆದು ವರದಿಸಲು ಸೂಚಿಸಿರುವಂತೆ ಈ ಹಿಂದೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಜಯನಗರ ಮತ್ತು ಬಸವನಗುಡಿ ವಿಧಾನ ಸಭಾಕ್ಷೇತ್ರದ ವ್ಯಾಪ್ತಿಯಲ್ಲಿ ಈಜುಕೊಳಗಳನ್ನು ಹೊರ ಗುತ್ತಿಗೆ ಆಧಾರದ ಮೇರೆಗೆ ನಿರ್ವಹಣೆಗೆ ವಹಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ.

ಕ್ರ.ಸಂ	ಈಜುಕೊಳದ ವಿಳಾಸ	ಹೊರಗುತ್ತಿಗೆಆಧಾರದ ಮೇಲೆ ನಿಯೋಜಿಸಲಾಗಿರುವ ಸಂಸ್ಥೆ	ವಾರ್ಷಿಕಗುತ್ತಿಗೆ ಮೊತ್ತ (ರೂ.ಗಳಲ್ಲಿ)	ಗುತ್ತಿಗೆ ನೀಡಿರುವಅವಧಿ	ಷರಾ
1	ಬಸವನಗುಡಿ ಈಜುಕೊಳ (7550.50 ಚ.ಮೀ)	ಬಸವನಗುಡಿ ಅಕ್ವಾಟಿಕ್ ಸಂಸ್ಥೆ	75,000/-	30 ವರ್ಷ 2023 ರಿಂದ 2053	ಸರ್ಕಾರದ ಆದೇಶ ಸಂಖ್ಯೆ: ನ.ಅ.ಇ/443/ ಎಂ.ಎನ್.ಜಿ/2018 ದಿನಾಂಕ:05.03.2019ರಂದು ಅನುಮೋದಿಸಲಾಗಿರುತ್ತದೆ.
2	ಜಯನಗರ 3ನೇ ಹಂತದಲ್ಲಿರುವ ಈಜುಕೊಳ (1208.40 ಚ.ಮೀ)	ಪಿ.ಎಂ.ಸ್ವಿಮ್ಮಿಂಗ್ ಸೆಂಟರ್	60,000/- (ರೂ.2,18,89,000/- ಅಭಿವೃದ್ಧಿ ಮೊತ್ತ)	35 ವರ್ಷ 2003 ರಿಂದ 2038	ಸರ್ಕಾರದ ಆದೇಶ ಸಂಖ್ಯೆ: ನ.ಅ.ಇ/69/ ಎಂ.ಎನ್.ವೈ/2002 ದಿನಾಂಕ:26.06.2003ರಂದು ಅನುಮೋದಿಸಲಾಗಿರುತ್ತದೆ.

65) ಕಂಡಿಕೆ (33) ಮತ್ತು (34) ರಲ್ಲಿ ವಿವರಿಸಿರುವಂತೆ, ಸದರಿ ಈಜುಕೊಳ ಮತ್ತು ಜಿಮ್‌ನಿಂದ ಬರುವ ಆದಾಯದ ಬಗ್ಗೆ ಮಾಡಿರುವ ಲೆಕ್ಕಾಚಾರಗಳಂತೆ ವಾರ್ಷಿಕ ಆದಾಯ ರೂ.78,46,200/- ಗಳಾಗಿದ್ದು, ವಾರ್ಷಿಕ ಖರ್ಚು ಅಂದಾಜು ರೂ.52,41,004/- ಗಳಾಗಿರುತ್ತದೆ. ಒಟ್ಟಾರೆ ವಾರ್ಷಿಕ ನಿವ್ವಳ ಲಾಭದ ಮೊತ್ತ ರೂ. 23,40,000/-ಗಳಾಗಿರುತ್ತದೆ ಸದರಿ ನಿವ್ವಳ ಲಾಭದ ಸರಾಸರಿ ಮೊತ್ತ ರೂ.24,00,000/- ಗಳನ್ನು ಮೂಲ ಆದಾಯ ಮೊತ್ತವನ್ನಾಗಿ ಪರಿಗಣಿಸಿ, 10 ವರ್ಷಗಳಿಗೆ ರೂ.2,40,00,000/- ಗಳ ಮೊತ್ತವನ್ನು ಪರಿಗಣಿಸಿ, ಮೇಲ್ಕಂಡ ಈಜುಕೊಳಗಳ ನಿರ್ವಹಣೆಯ ವಾರ್ಷಿಕಗುತ್ತಿಗೆ ಮೊತ್ತಕ್ಕೆ ಹೋಲಿಕೆ ಮಾಡಿದಾಗ ಸದರಿ ಈಜುಕೊಳಕ್ಕೆ ನಿಗಧಿಪಡಿಸಿರುವ ವಾರ್ಷಿಕ ಬಾಡಿಗೆ ಮೊತ್ತ ರೂ.24,00,000/-ಗಳು ಸಮಂಜಸ ಮತ್ತು ಪಾಲಿಕೆಗೆ ಲಾಭದಾಯವಾಗಿರುವುದರಿಂದ ಎಂದು ಕಾರ್ಯಪಾಲಕ ಅಭಿಯಂತರರಯ (ಯಡಿಯೂರು) ವಿಭಾಗ ರವರು ಅಭಿಪ್ರಾಯಿಸಿ

Scanned with OKEN Scanner

ವಿಷಯ:_____ ಪುಟದ ಸಂಖ್ಯೆ -18-

_____ ಕಡತದ ಸಂಖ್ಯೆ_____

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
66)	ಪದ್ಮನಾಭನಗರ ವಿಧಾನ ಸಭಾಕ್ಷೇತ್ರದ ವ್ಯಾಪ್ತಿಗೆ ಬರುವ ವಾರ್ಡ್ ಸಂಖ್ಯೆ 108ರ ಗಣೇಶ ಮಂದಿರದ ಬನಶಂಕರಿ 2ನೇ ಹಂತದಲ್ಲಿ ಪಾಲಿಕೆಯಿಂದ ನಿರ್ಮಿಸಲಾಗಿರುವ ಈಜುಕೊಳದ ನಿರ್ವಹಣೆಯನ್ನು 10 ವರ್ಷಗಳ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ನಿಯೋಜಿಸಲು ಆಸಕ್ತಿಯುಳ್ಳ ಕಂಪನಿಗಳು/ ಸರಬರಾಜುದಾರರು/ ಗುತ್ತಿಗೆದಾರರು/ ಕ್ರೀಡಾ ಸಂಸ್ಥೆಗಳಿಗೆ ನಿಯಮಾನುಸಾರವಾಗಿ ನಿಯೋಜಿಸುವ ಉದ್ದೇಶದಿಂದ 1)ಹತ್ತು ವರ್ಷಗಳ ಅವಧಿಗೆ ಹೊರಗುತ್ತಿಗೆ ನೀಡಲು ತಯಾರಿಸಲಾಗಿರುವ ಕರಡು RFP ದಾಖಲೆಗೆ ಅನುಮೋದನೆ. 2) ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ದಿನ ಪತ್ರಿಕೆಗಳಲ್ಲಿ ಪ್ರಕಟಿಸಲು ಅನುಮೋದನೆ ಕೋರಿ
67)	ಮೇಲಿನ ಎಲ್ಲಾ ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಾ ಸದರಿ ಈಜುಕೊಳ ಮತ್ತು ಜಿಮ್‌ನಿಂದ ಸುಮಾರು 4 ರಿಮದ 5 ವರ್ಷ ಹಳೆಯದಾಗಿದ್ದು ಉಪಯೋಗಿಸದೆ ನಿಷ್ಕ್ರಿಯೆ ಸ್ಥಿತಿಯಲ್ಲಿರುತ್ತದೆ. ಮತ್ತು ಸಾರ್ವಜನಿಕರ ಉಪಯೋಗಕ್ಕೆ ತರಲು ಸುಮಾರು 7.10 ಕೋಟಿಗಳ ವೆಚ್ಚವಾಗುವುದೆಂದು ಅಂದಾಜಿಸಲಾಗಿರುತ್ತದೆ. ಅದ್ದರಿಂದ ಪಾಲಿಕೆಗೆ ಆರ್ಥಿಕ ಹೊರೆ ಇಲ್ಲದಂತೆ as is where is basis ಅಡಿಯಲ್ಲಿ KPPP ನಿಯಮಾನುಸಾರ ಅಲ್ಪಾವಧಿ ಟೆಂಡರ್ ಕರೆಯಲು ಅನುಮೋದನೆ ಕೋರಿದೆ.
68)	ಕಾರ್ಯಪಾಲಕ ಅಭಿಯಂತರರಯ(ಯಡಿಯೂರು) ರವರು ಕಂಡಿಕೆ (50)ರಲ್ಲಿ ವಿವರಿಸಿರುವಂತೆ ತಿಂಗಳಿಗೆ ಸುಮಾರು 2.00ಲಕ್ಷಗಳಂತೆ 12 ತಿಂಗಳಿಗೆ 24.00ಲಕ್ಷಗಳ ಅದಾಯ ನಿರೀಕ್ಷಿಸಬಹುದಾಗಿದ್ದು 10 ವರ್ಷಗಳಿಗೆ 2.40ಕೋಟಿ ಆದಾಯವನ್ನು ನಿರೀಕ್ಷಿಸಬಹುದಾಗಿದ್ದು ಪಾಲಿಕೆ ಲಾಭದಾಯಕವಾಗಿರುವುದರಿಂದ ಬಿಡ್ದುದಾರರ ಸದರಿ ಈಜುಕೊಳ ಮತ್ತು ಜಿಮ್‌ನಿಂದ ಸಾರ್ವಜನಿಕರ ಉಪಯೋಗಕ್ಕೆ ತರಲು ತಮ್ಮ ಸ್ವಂತ ವಚ್ಚದಲ್ಲಿ 10 ವರ್ಷಗಳು ಅವಧಿಗೆ ಭರಿಸುವ ಷರತ್ತಿಗೊಳಪಟ್ಟು ಕರಡು RPF Document ತಯಾರಿಸಲಾಗಿ ಅನುಮೋದನೆ ಸಲ್ಲಿಸಿದೆ.
69)	ಸದರಿ ಟೆಂಡರ್‌ನಲ್ಲಿ ಯಾವುದೇ ಬಿಡ್ದುದಾರರ ಭಾಗವಹಿಸದಿದ್ದಲ್ಲಿ ಮುಂದಿನ ಕ್ರಮಕ್ಕೆಗೊಳ್ಳಲಾಗುವುದು.
೫)	ತಾಂತ್ರಿಕ ಸಹಾಯಕರು
೫)	ಮುಖ್ಯ ಅಭಿಯಂತರರು (ಮಲ್ಲೇಶ್ವರಂ ವಲಯ-02)
72)	ಅಪರ ಆಯುಕ್ತರು(ಅಭಿವೃದ್ಧಿ-ಪಶ್ಚಿಮ) 31/3/14
-73-	Commissioner, BWSSB Follow due process & proceed